ಓ.ಎಸ್.ನಂ.376/2007

ಡಿಡಬ್ಲ್ಯೂ.1

**ಇಂದು ದಿನಾಂಕ 06-01-2026 ರಂದು ಡಿಡಬ್ಲ್ಯೂ-1 ರವರನ್ನು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನಾನು ದಾಖಲು ಮಾಡಿರುವ ಲಿಖಿತ ಪತ್ರದಲ್ಲಿರುವ ವಿಚಾರಗಳನ್ನು ವಕೀಲರಿಗೆ ನಾನೇ ತಿಳಿಸಿರುತ್ತೇನೆ. ವಾದಿ ಈ ದಾವೆಯನ್ನು ಯಾವ ಕಾರಣಕ್ಕಾಗಿ ದಾಖಲು ಮಾಡಿದ್ದಾರೆ ಎಂದು ನಾನು ಸಂಪೂರ್ಣವಾಗಿ ತಿಳಿದುಕೊಂಡಿದ್ದೇನೆ. ವಾದಿ ಈ ದಾವೆಯಲ್ಲಿ ಯಾವ ದಾಖಲಾತಿಗಳನ್ನು ಹಾಜರುಪಡಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 1 ಎಕರೆ 04 ಗುಂಟೆ ಎಂದರೆ ಸರಿ. ದಾವಾ ಆಸ್ತಿಯ ಮೂಲ ಮಾಲೀಕರ ಹೆಸರು ದೇಕಪ್ಪ ಎಂದರೆ ಸರಿ. ಸದರಿ ದೇಕಪ್ಪ ರವರಿಗೂ ವಾದಿಗೂ ಯಾವ ರೀತಿ ಸಂಬಂಧ ಇದೆ ಎಂದು ನಾನು ತಿಳಿದುಕೊಂಡಿಲ್ಲ ಎಂದರೆ ಸರಿ. ದೇಕಪ್ಪ ರವರ ತಂದೆ ದೊಡ್ಡ ಚನ್ನಪ್ಪ ರವರಿಗೆ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಂದೆ ಚಿಕ್ಕವೀರಪ್ಪ ಹಾಗೂ ದೇಕಪ್ಪ ಅಣ್ಣ ತಮ್ಮಂದಿರು ಎಂದರೆ ನನಗೆ ಗೊತ್ತಿಲ್ಲ. ಚಿಕ್ಕವೀರಪ್ಪ ಹಾಗೂ ದೇಕಪ್ಪ ದೊಡ್ಡ ಚನ್ನಪ್ಪ ರವರ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ದೇಕಪ್ಪ ರವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ, ದೇಕಪ್ಪ ರವರ ಆಸ್ತಿ.

2. ದೇಕಪ್ಪ ರವರ ಮಗಳ ಹೆಸರು ಮುನಿಯಮ್ಮ ಎಂದರೆ ಸರಿ. ಸದರಿ ಮುನಿಯಮ್ಮ ರವರ ಹೆಸರಿಗೆ ದಾವಾ ಆಸ್ತಿ ಯಲ್ಲಿ 1 ಎಕರೆ 4 1/2 ಗುಂಟೆ ಆಸ್ತಿ ಖಾತೆ ಆಗಿರುತ್ತದೆ ಎಂದರೆ ಸರಿ. ನಿಪಿ-3 ರಲ್ಲಿ ಎಂ. ಆರ್. ನಂ. 33/2006-07 ಎಂದು ನಮೂದು ಆಗಿದೆ ಎಂದರೆ ಸರಿ. ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಅದಕ್ಕೆ ಸಂಬಂಧಪಟ್ಟ ಎಂ. ಆರ್. ನಂ. 33 / 2006 - 07 ದಾಖಲಾತಿಯನ್ನು ನಾನು ಪರಿಶೀಲಿಸಿರುತ್ತೇನೆ. ಆ ಸಮಯದಲ್ಲಿ ದೇಕಪ್ಪ ರವರ ವಂಶವೃಕ್ಷವನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿ 2 ರಿಂದ 5 ರವರು ಸದರಿ 1 ಎಕರೆ 4 1/2 ಗುಂಟೆ ಆಸ್ತಿ ಯ ಪೈಕಿ 20 ಗುಂಟೆಯನ್ನು ವಾದಿಗೆ ಕರಾರು ಮಾಡಿಕೊಟ್ಟಿದ್ದರು ಎಂದರೆ ತಪ್ಪಾಗಿ ಮಾಡಿರುತ್ತಾರೆ. ಪ್ರತಿವಾದಿ 2 ರಿಂದ 5 ರವರು ದಿನಾಂಕ 18.07.2007 ರಂದು ವಾದಿಗೆ ಸದರಿ 20 ಗುಂಟೆಯನ್ನು ಕ್ರಯ ಮಾಡಿಕೊಟ್ಟಿದ್ದಾರೆ ಎಂದರೆ ಸರಿ, ಅದಕ್ಕೂ ಪೂರ್ವದಲ್ಲಿ ಆ ಆಸ್ತಿ ನನ್ನ

ಹೆಸರಿಗೆ ಕ್ರಯ ಆಗಿತ್ತು. ದಾವಾ ಆಸ್ತಿಯ ಚೆಕ್ಕು ಬಂದಿ ಪೂರ್ವ ಮತ್ತು ಪಶ್ಚಿಮಕ್ಕೆ ಮುನಿಶಾಮಪ್ಪ ರವರ ಜಮೀನು ಇದೆ ಎಂದರೆ ಪೂರ್ವಕ್ಕೆ ವೆಂಕಟೇಶ್ ರವರ ಜಮೀನು ಪಶ್ಚಿಮಕ್ಕೆ ಮುನಿಶಾಮಪ್ಪ ರವರ ಜಮೀನು ಇದೆ. ಉತ್ತರಕ್ಕೆ ಬಂಡಿಜಾಡು ಇದೆ ಎಂದರೆ ರಸ್ತೆ ಇದೆ. ದಕ್ಷಿಣಕ್ಕೆ ಮೋಟಪ್ಪ ರವರ ಜಮೀನು ಇದೆ ಎಂದರೆ ಚಿಕ್ಕಮುನಿವೀರಪ್ಪ ರವರ ಜಮೀನು ಇದೆ. ದಾವಾ ಆಸ್ತಿಯಲ್ಲಿ ನೀಲಗಿರಿ ಬೆಳಸಿಕೊಂಡು ವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ, ನಾನು ಖರೀದಿ ಮಾಡುವ ಕಾಲಕ್ಕೆ ಮುನಿಯಮ್ಮರವರ ಸ್ವಾಧೀನದಲ್ಲಿ ಇತ್ತು. ಕ್ರಯದ ಕರಾರಾಗುವ ಪೂರ್ವದಲ್ಲಿಯೂ ಸಹ ವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದರು ಎಂದರೆ ಸುಳ್ಳು. ವಾದಿಯ ಹೆಸರಿಗೆ ಕ್ರಯ ಆಗಿರುವ ಬಗ್ಗೆ ನ್ಯಾಯಾಲಯದಲ್ಲಿ ದಾವೆ ದಾಖಲು ಮಾಡಿದಾಗಲೇ ನನಗೆ ತಿಳಿದುಬಂದಿರುತ್ತದೆ. ಪ್ರತಿವಾದಿ 2 ರಿಂದ 5 ರವರಿಂದ ವಾದಿ ದಾವಾ ಆಸ್ತಿಯನ್ನು ರೂ.75,000/- ನೀಡಿ ಖರೀದಿ ಮಾಡಿದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಸಂಬಂಧ ಇದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದ ಆಧಾರದ ಮೇಲೆ ಈ ದಿನವೂ ವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ , ನಾನು ಸ್ವಾಧೀನದಲ್ಲಿ ಇದ್ದೇನೆ. ನಾನು ರಾಜಕೀಯವಾಗಿ ಪ್ರಬಲವಾಗಿದ್ದು ವಾದಿಗೆ ಮೋಸ ಮಾಡುವ ಸಲುವಾಗಿ ನಿಡಿ 1 ಕ್ರಯಪತ್ರವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯ ಸ್ವಾಧೀನಕ್ಕೆ ತೊಂದರೆ ಮಾಡಿದಾಗ, ವಾದಿ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸುಳ್ಳು. ನಾನು ಈ ದಾವೆಯ ಸಲುವಾಗಿ ನಿಡಿ-1 ರಿಂದ ನಿಡಿ-5 ದಾಖಲಾತಿಗಳನ್ನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ,**